( ಇಂದು ದಿನಾಂಕಃ 04.04.2025 ರಂದು ವಾದಿ ಪರ ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಾದ ಶ್ರೀ ವಿ ಎ ಟಿ ರವರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ವಿಷಯಗಳು ಸತ್ಯವಾಗಿದ್ದು, ಅದನ್ನು ನಾನೇ ಹೇಳಿ ಬರೆಸಿದ್ದು, ಅದರಲ್ಲಿ ಬರೆದ ವಿಷಯಗಳನ್ನು ತಿಳಿದುಕೊಂಡು ನನ್ನ ಸಹಿ ಮಾಡಿರುತ್ತೇನೆ.

ಸಾಕ್ಷಿ ನಿಪಿ-4 ನೋಡಿ ಅದರಲ್ಲಿರುವ ತನ್ನ ಸಹಿ ಗುರುತಿಸಿಕೊಂಡಿರುವುದರಿಂದ ಸಾಕ್ಷಿಯ ಸಹಿಯನ್ನು ನಿಪಿ-4(ಎ) ರಿಂದ (ಇ) ಎಂದು ಗುರುತಿಸಲಾಯಿತು.

ನಿಪಿ-4 ರ ಕರಾರು ಪತ್ರವನ್ನು ಪ್ರತಿವಾದಿಯರ ಮಾಹಿತಿಯ ಮೇರೆಗೆ ನಾನೇ ತಯಾರಿಸಿದ್ದು ಪಕ್ಷಗಾರರು ಸಹಿ ಮಾಡಿದ ನಂತರ ನಾನು ಸದರಿ ದಾಖಲೆಯನ್ನು ನೋಟರಿ ಪ್ರಮಾಣಿಕರಿಸಿ ಯಾಥಾರ್ತಿಸಿರುತ್ತೇನೆ.

ಸಾಕ್ಷಿ ನೋಟರಿ ರಜಿಸ್ಟರನ್ನು ಹಾಜರುಪಡಿಸಿದ್ದು ಅದನ್ನು ನಿಪಿ-8 ಎಂತಲೂ ಹಾಗೂ ಸದರಿ ರಜಿಸ್ಟರಿನ ದಿನಾಂಕಃ 12-06-2023 ರ ನಮೂದುಗಳನ್ನು ಒಟ್ಟಾಗಿ ನಿಪಿ-8 (ಎ) ಅಂತಾ ಗುರುತಿಸಲಾಯಿತು.

ನಿಪಿ-4 ರ ಕರಾರು ಪತ್ರದಲ್ಲಿ ವಾದಿ ಪ್ರತಿವಾದಿ ಮತ್ತು ಪ್ರತಿವಾದಿಯ ಮಕ್ಕಳ ಸಹಿಗಳು ಇರುತ್ತವೆ. ಅದರಲ್ಲಿ ವಾದಿ ಹಾಗೂ ಪ್ರತಿವಾದಿಯ ತಾಯಿ ಮರಿಯಾ ಪೌಲು ಡಯಾಸ್ ರವರ ಪೋಟೋ ಇದೆ. ಸದರಿ ಪೋಟೋಗಳ ಮೇಲೆ ಇರುವ ಸಹಿ ಅವರದು. ನಿಪಿ-4 ರ ಕೊನೆಯ

ಪುಟದಲ್ಲಿ ಪ್ರತಿವಾದಿಯರ ಒಪ್ಪಿಗೆ ಸಹಿಗಳು ಇದೆ. ಅದೇ ರೀತಿ ಸದರಿ ದಾಖಲೆಗೆ ಇಬ್ಬರೂ ಸಾಕ್ಷಿದಾರರು ಸಹಿ ಮಾಡಿರುತ್ತಾರೆ.

ಪಾಟಿಸವಾಲು ಪ್ರತಿವಾದಿಯರ ಪರ ವಕೀಲರು ಕಾಲಾವಕಾಶ ಕೋರಿದ್ದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

Sd/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಕಾರವಾರ.